CC-O. In Public Domain. Digitized by eGangotri

ಶ್ರೀ ಕೃಷ್ಣರಾಜೇಂದ್ರ ಒಡೆಯರವರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕ ಕುರಿತು

ಅನಕ್ಷರಸ್ಥ ವಯಸ್ಕರು ಓದು, ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲಂ ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿ ಇರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸ ಬೇಕಾದ, ಆ ದಿಕ್ಕಿನಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲಂ, ಓದಿನ ಮೂಲಕ ಅರಿವು ಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ, ಅಭಿರುಚಿಗೆ ಅನುಗುಣವಾಗಿ, ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರ ಬಂದಿರುವ ಶಿಕ್ಷಣ ಮಾಲೆಯ ಪುಸ್ತಕಗಳೆಂದೇ ಜನ ಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಂತ ಮೆಚ್ಚುಗೆ ಪಡೆದಿರುವ ಈ ಮಾಲೆಯ ಪುಸ್ತಕಗಳಲ್ಲಿ ಮೂವತ್ತು ಕೃತಿಗಳ ಪುನರ್ ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಲಿಲ್ಲದು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಪುಸ್ತಕ ಮಾಲೆ — ೨

ಶ್ರೀ ಕೃಷ್ಣರಾಜೇಂದ್ರ ಒಡೆಯರವರು

ನಾ. ಕಸ್ತೂರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೃಷ್ಣರಾಜೇಂದ್ರ ಒಡೆಯರವರು

೧೮೮೪ನೆ ಇಸವಿ ; ಜೂನ್ ತಿಂಗಳು ; ಎಂಟನೆಯ ತಾರೀಖು ; ಶುಕ್ರವಾರ. ಮೈಸೂರಿನಲ್ಲಿ ಹಿಂದೆಂದೂ ಇಲ್ಲದ ಸಡಗರ. ಜನರು ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ಒಬ್ಬರಿಗೊಬ್ಬರು ಸಂತೋಷದ ಸುದ್ದಿಯನ್ನು ಹೇಳಿಕೊಳ್ಳುತ್ತಾ, ನಲಿಯುತ್ತಿದ್ದರು. ಅರಮನೆಯಿಂದ ಬಂಡಿಗಳಲ್ಲಿ ಸಕ್ಕರೆ ತುಂಬಿ ತಂದು ಬೀದಿಬೀದಿಗಳಲ್ಲಿ ಹಂಚುತ್ತಿದ್ದರು. ಆ ದಿನ ಭಿಕ್ಷುಕರಿಗೆಲ್ಲ ಪಾಯಸ ಪರಮಾನ್ನ, ಬಟ್ಟೆಬರೆ ಬೇರೆ !

ಏಕೆಂದರೆ, ಮೈಸೂರು ಪ್ರಜೆಗಳ ಪ್ರಾರ್ಥನೆ ಆ ದಿನ ಕೈಗೂಡಿತು ! ಯದುವಂಶವು ನೆಲೆಗೊಂಡಿತು ! ಮಹಾರಾಜರವರಾದ ಶ್ರೀ ಚಾಮರಾಜೇಂದ್ರ ಒಡೆಯರವರಿಗೆ ಪುತ್ರ ಸಂತಾನವಾಯಿತು. ಶ್ರೀ ಕೃಷ್ಣರಾಜೇಂದ್ರ ಒಡೆಯರು ಅವತರಿಸಿದರು.

* * *

ರಾಜಕುಮಾರರಾದ ಚಿಕ್ಕ ಮಹಾಸ್ವಾಮಿಗಳ ಬಾಲಲೀಲೆಯನ್ನು ಕಂಡು ತಾಯಿ ತಂದೆಗಳು ಹಿಗ್ಗಿದರು. ಕುಮಾರರು ಓದುಬರಹವನ್ನು ಬಲುಬೇಗ ಕಲಿತರು. ದೇವರ ನಾಮಗಳನ್ನೂ ಪದಗಳನ್ನೂ ಕಂಠಪಾಠಮಾಡಿ ಭಕ್ತಿಯಿಂದ ಕೈ ಜೋಡಿಸಿ ನಿಂತು ಅವರು ಮುದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುದ್ದಾಗಿ ಹೇಳುತ್ತಿದ್ದರು. ಅವರಿಗೂ ಅವರ ತಮ್ಮಂದಿರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರಿಗೂ ಪ್ರತ್ಯೇಕವಾಗಿ ಒಂದು ಪಾಠಶಾಲೆಯನ್ನು ಅರಮನೆಯಲ್ಲಿ ಏರ್ಪಡಿಸಲಾಯಿತು. ರಾಜಕುಮಾರರ ಸಂಗಡ ಆಟಪಾಠಗಳನ್ನು ಕಲಿಯಲು ಕೆಲವರು ಅರಸುಮಕ್ಕಳನ್ನೂ ಅಧಿಕಾರಿಗಳ ಮಕ್ಕಳನ್ನೂ ಆರಿಸಿ ಸೇರಿಸಿಕೊಂಡರು. ಶ್ರೀ ಕೃಷ್ಣರಾಜೇಂದ್ರ ಒಡೆಯರು ಕನ್ನಡದ ಜೊತೆಗೆ ಇಂಗ್ಲೀಷು, ಸಂಸ್ಕೃತ, ಉರ್ದು ಮೊದಲಾದ ಭಾಷೆಗಳನ್ನು ಕಲಿತರು; ಸಂಗೀತ, ಚಿತ್ರಕಲೆ, ಷಿಕಾರಿ, ಕುದುರೆ ಸವಾರಿ ಇವುಗಳಲ್ಲೆಲ್ಲಾ ತುಂಬಾ ನಿಪುಣರಾದರು.

ಆಗ ಮೋಡವಿಲ್ಲದ ಆಕಾಶದಿಂದ ಇದ್ದಕ್ಕಿದ್ದ ಹಾಗೆ ಸಿಡಿಲು ಬಡಿದಂತೆ, ಮಹಾರಾಜರವರಾದ ಶ್ರೀ ಚಾಮರಾಜೇಂದ್ರ ಒಡೆಯರವರು ಕೇವಲ ಮೂವತ್ತೆರಡನೆಯ ವಯಸ್ಸಿನಲ್ಲಿ, ಕಲ್ಕತ್ತಾ ನಗರಕ್ಕೆ ಪ್ರಯಾಣ ಹೋಗಿದ್ದಾಗ ಅಲ್ಲೇ ಕಾಲವಶರಾದರು. ಇಡೀ ದೇಶವೇ ಕಣ್ಣೀರು ಕರೆದು ಗೋಳಾಡಿತು. ಮಹಾರಾಣಿಯವರಾದ ಶ್ರೀ ವಾಣೀವಿಲಾಸ ಸನ್ನಿಧಾನದವರ ಮತ್ತು ಅವರ ಮಕ್ಕಳ ದುಃಖವನ್ನು ಕಂಡು ಹಿರಿಯರೂ ಕಿರಿಯರೂ ಮರುಗಿದರು.

ಹೀಗೆ ಹತ್ತು ವರ್ಷದ ಬಾಲಕರಾಗಿದ್ದಾಗಲೇ ಶ್ರೀ ಕೃಷ್ಣರಾಜೇಂದ್ರ ಒಡೆಯರು ಮೈಸೂರು ಸಂಸ್ಥಾನದ ದೊರೆತನವನ್ನು ಹೊರಬೇಕಾಯಿತು. ವೀರಮಾತೆಯಾದ

CC-O. In Public Domain. Digitized by eGangotri

ವಾಣೀವಿಲಾಸಸನ್ನಿಧಾನದವರು ತಮ್ಮ ಸಂಕಟವನ್ನು ನುಂಗಿ ಕೊಂಡು "ರೀಜಂಟ್" ಅಧಿಕಾರವನ್ನು ವಹಿಸಿ ಮಗನ ಪರ ವಾಗಿ ಆಡಳಿತವನ್ನು ನಿರ್ವಹಿಸಿದರು. ಸರ್ ಕೆ. ಶೇಷಾದ್ರಿ ಅಯ್ಯರ್‌ರವರಂತಹ ನುರಿತ ಮಂತ್ರಿಗಳನ್ನು ನಿಯಮಿಸಿ ಕೊಂಡು ಅವರು ಪ್ರಜೆಗಳನ್ನು ಪರಿಪಾಲಿಸಿದರು. ಚಿಕ್ಕ ವಯಸ್ಸಿನ ಪ್ರಭುಗಳಿಗೆ ರಾಜ್ಯಭಾರದ ಕ್ರಮವನ್ನು ಪರಿಚಯ ಮಾಡಿಕೊಡಲು ಅನುಭವಸ್ಥರಾದವರನ್ನು ಕರೆಸಿ ನಿಯಮಿಸಿದರು. ಮಹಾಸ್ವಾಮಿಗಳು ತಮ್ಮ ಬುದ್ಧಿಶಕ್ತಿ ಯಿಂದಲೂ ನಯವಿನಯಗಳಿಂದಲೂ ತಮ್ಮ ಉಪಾಧ್ಯಾಯ ರನ್ನು ಬೆರಗುಗೊಳಿಸಿದರು. ೧೯೦೦ ನೆ ಇಸವಿಯಲ್ಲಿ ಮಹಾ ಮಾತೃಶ್ರೀಯವರು ಮಹಾಸ್ವಾಮಿಗಳಿಗೆ ವಿವಾಹಮಹೋ ತ್ಸವವನ್ನು ನೆರವೇರಿಸಿದರು. ಮಧ್ಯ ಹಿಂದೂಸ್ಥಾನದಲ್ಲಿ ರುವ ವಾಣಾಸಂಸ್ಥಾನದ ರಾಜರ ಪುತ್ರಿ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರನ್ನು ತಂದುಕೊಂಡು ಅತ್ಯಂತ ವಿಜೃಂಭಣೆ ಯಿಂದ ಮದುವೆಯನ್ನು ನಡೆಸಿದರು.

* * *

೧೯೦೨ನೆ ಇಸವಿಯಲ್ಲಿ ಮಹಾರಾಜರಿಗೆ ಹದಿನೆಂಟು ವರ್ಷ ತುಂಬಿತು. ಆಗ ಚಕ್ರವರ್ತಿಗಳ ಪ್ರತಿನಿಧಿಯಾಗಿದ್ದ ಕರ್ಜನ್ ಪ್ರಭು ಎಂಬುವರು ಮೈಸೂರಿಗೆ ಬಿಜಯಮಾಡಿ ಸಿದರು. ಅರಮನೆಯಲ್ಲಿ ಒಂದು ವಿಶೇಷ ದರ್ಬಾರ್ ನಡೆಸಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರಿಗೆ ಆಡಳಿತದ ಸಮಸ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧಿಕಾರವನ್ನೂ ವಹಿಸಿಕೊಟ್ಟರು. ಆ ದಿನ ಅಲ್ಲಿ ನರೆದಿದ್ದ ಮಹಾಜನಗಳಿಗೆ ಮಹಾಸ್ವಾಮಿಗಳು, "ಈಗ ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಯು ಎಷ್ಟು ದೊಡ್ಡದೆಂಬುದನ್ನು ಚೆನ್ನಾಗಿ ನಾವು ತಿಳಿದುಕೊಂಡಿದ್ದೇವೆ. ಅದನ್ನು ಹೇಗೆ ನೆರವೇರಿಸುತ್ತೇವೆಂಬುದನ್ನು ಬಾಯಲ್ಲಿ ಹೇಳುವುದಕ್ಕಿಂತ ಕಾರ್ಯದಲ್ಲಿ ತೋರಿಸಬೇಕೆಂಬುದೇ ನಮ್ಮ ಉದ್ದೇಶ. ನಮ್ಮ ಪ್ರಜೆಗಳಿಗೆ ಸುಖ ಸಂತೋಷ ಸಿಕ್ಕುವಂತೆ ನಿರ್ಭಯವಾಗಿ ಪಕ್ಷಪಾತವಿಲ್ಲದೆ ನಾವು ಆಳುತ್ತೇವೆ. ಇದಕ್ಕೆ ಬೇಕಾದ ಸಾಮರ್ಥ್ಯವನ್ನು ಭಗವಂತನು ದಯಪಾಲಿಸಲಿ ಎಂಬುದೇ ನಮ್ಮ ಪ್ರಾರ್ಥನೆ" ಎಂದು ಅಪ್ಪಣೆಕೊಡಿಸಿದರು. ಈ ಮಾತನ್ನು ಕೇಳಿ ತರುಣ ಮಹಾರಾಜರ ಧೈರ್ಯವನ್ನೂ ದೂರದೃಷ್ಟಿಯನ್ನೂ ಕಂಡು ಎಲ್ಲರೂ ಅಚ್ಚರಿಗೊಂಡರು.

ಅಂದಿನಿಂದ ಅವರು ರಾಜ್ಯಭಾರವನ್ನು ಜಾಣತನದಿಂದ ನಡೆಸುತ್ತಾ ಬಂದರು. ಇನ್ನೂ ಚಿಕ್ಕವರಾಗಿದ್ದರೂ ಕೂಡ ಅವರು ಅಷ್ಟು ಕುಶಲರಾಗಿದ್ದುದನ್ನು ಕಂಡು ಆಗಿನ ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿ ಅವರು "ಮಹಾರಾಜರು ಆಡಳಿತದಲ್ಲಿ ತೋರಿಸಿದ ನಿಷ್ಠೆ ನಮ್ಮೆಲ್ಲರನ್ನೂ ಬೆರಗುಗೊಳಿಸುತ್ತಿದೆ" ಎಂದರಂತೆ. ತಮ್ಮ ಪ್ರಜೆಗಳ ಕಷ್ಟಗಳೇನು ಕುಂದು ಕೊರತೆಗಳೇನು ಅವುಗಳಿಗೆ ತಕ್ಕ ಪರಿಹಾರವೇನು ಎಂದು ಅವರು ಸದಾ ವಿಚಾರ ಮಾಡುತ್ತಿದ್ದರು. ರೈತರ ಜೀವನವನ್ನು ತಿಳಿದುಕೊಳ್ಳಲು ಅವರು ಅನೇಕ ಸಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಥಾನವನ್ನು ಸುತ್ತಿಬಂದರು ರಾಜಯೋಗ್ಯವಾದ ತಮ್ಮ ಉಡಿಗೆ ತೊಡಿಗೆಗಳನ್ನು ತೆಗೆದಿಟ್ಟು ಸಾಮಾನ್ಯರಂತೆ ಕಾಣಿಸಿ ಕೊಂಡು ಹಳ್ಳಿಗರ ಮನೆಗಳಿಗೆ ನುಗ್ಗುತ್ತಿದ್ದರಂತೆ. ಅಥವಾ ಅವರೊಂದಿಗೆ ಎತ್ತಿನ ಗಾಡಿಯಲ್ಲಿ ಕುಳಿತು ಸಂಚರಿಸುತ್ತಿದ್ದರಂತೆ. ಅಂತು ಅವರನ್ನು ಮಾತನಾಡಿಸುತ್ತಾ ತಮಗೆ ಬೇಕಾದ ವಿಷಯಗಳನ್ನು ಸಂಗ್ರಹ ಮಾಡುತ್ತಿದ್ದರು.

ಮಹಾಸ್ವಾಮಿಯವರು ಸಿಂಹಾಸನಾರೋಹಣ ಮಾಡಿದ ಕೆಲವು ವರ್ಷಗಳಲ್ಲೇ ಅನೇಕ ಹೊಸ ಸುಧಾರಣೆ ಗಳಾದುವು. ರೈತರ ಸಾಲವನ್ನು ಕಡಿಮೆ ಮಾಡಲು ಸಹಕಾರ ಸಂಘಗಳು ಸ್ಥಾಪಿತವಾದುವು. ಪಶುವೈದ್ಯ ಇಲಾಖೆ ಯೊಂದು ಹೊಸದಾಗಿ ಪ್ರಾರಂಭವಾಯಿತು. ದೇಶದ ಸಂಪ ತ್ತನ್ನು ಹೆಚ್ಚಿಸುವುದು ಹೇಗೆ ಎಂದು ಯೋಚಿಸಿ ಸರ್ಕಾರಕ್ಕೆ ಸಲಹೆಮಾಡಲು ಒಂದು ಸಮಿತಿಯನ್ನು ಏರ್ಪಡಿಸಿದರು ಪ್ಲೇಗು, ಕಾಲರಾ, ಸಿಡುಬು ಮೊದಲಾದ ಖಾಯಿಲೆಗಳು ಹರಡದಂತೆಯೂ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಆರೋಗ್ಯ ಇಲಾಖೆಯನ್ನು ಏರ್ಪಡಿಸಲಾಯಿತು.

ಸಂಸ್ಥಾನದ ದಿವಾನರೊಂದಿಗೆ ಕೆಲಸಮಾಡಲು ಮಹಾ ಸ್ವಾಮಿಯವರು ಇಬ್ಬರು ಸಚಿವರನ್ನು ನಿಯಮಿಸಿದರು. ತಮ್ಮ ತಂದೆಯವರು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆ ಯನ್ನು ನಡೆಸಿಕೊಂಡು ಬಂದಿದ್ದರ ಜೊತೆಗೆ ಆಡಳಿತದಲ್ಲಿ ಪ್ರಜೆಗಳ ಸಹಕಾರವು ಇನ್ನೂ ಹೆಚ್ಚಾಗಿ ದೊರೆಯುವಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಯವಿಧಾಯಕ ಸಭೆ ಎಂಬ ಮತ್ತೊಂದು ಸಂಸ್ಥೆಯನ್ನೂ ರೂಪುಗೊಳಿಸಿದರು.

೧೯೧೨ ರಲ್ಲಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ತಮ್ಮ ಪ್ರಧಾನ ಮಂತ್ರಿಗಳನ್ನಾಗಿ ಆರಿಸಿ ನಿಯಮಿಸಿದರು. ಇವರು ಬೊಂಬಾಯಿ ಪ್ರಾಂತ್ಯದಲ್ಲೂ ನಮ್ಮ ಸಂಸ್ಥಾನದಲ್ಲೂ ಚೀಫ್ ಇಂಜಿನಿಯರಾಗಿ ಕೀರ್ತಿಗಳಿಸಿದ್ದರು. ಜನರ ಗುಣಾವಗುಣಗಳನ್ನು ಚೆನ್ನಾಗಿ ಅರಿತಿದ್ದ ಮಹಾಸ್ವಾಮಿಯವರು ಇಂತಹ ವರನ್ನು ಚುನಾಯಿಸಿದ್ದು ಮೈಸೂರಿನ ಪುಣ್ಯೋದಯವೇ ಆಯಿತು. ಏಕೆಂದರೆ, ವಿಶ್ವೇಶ್ವರಯ್ಯನವರು ಕೆಚ್ಚೆದೆಯ ಸಾಹಸಿಗಳು; ದೂರದರ್ಶಿಗಳು; ಅವರದು ಆಡಳಿತದಲ್ಲಿ ನುರಿತ ಕೈ; ಹೊಸ ಯೋಜನೆಗಳನ್ನು ಸದಾ ಯೋಚಿಸುವ ಬುದ್ಧಿ. ಕೈಗಾರಿಕೆಗಳನ್ನೂ ಕಾರ್ಖಾನೆಗಳನ್ನೂ ನಡೆಸುವುದೆಂದರೆ ಅವರಿಗೆ ನೀರು ಕುಡಿದ ಹಾಗೆ. ವ್ಯವಸಾಯವನ್ನು ಪೋಷಿಸಿ ನಮ್ಮ ದೇಶದಿಂದ ಬಡತನವನ್ನು ತೊಲಗಿಸ ಬೇಕೆಂದು ಅವರ ಆಸೆ.

ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಭದ್ರಾವತಿಯ ಕಬ್ಬಿಣ ಕಾರ್ಖಾನೆಯೂ, ಮೈಸೂರು ಬೆಂಗಳೂರುಗಳಲ್ಲಿ ಗಂಧದೆಣ್ಣೆ ಕಾರ್ಖಾನೆಗಳೂ, ಸರ್ಕಾರದ ಸಾಬೂನು ಕಾರ್ಖಾನೆಯೂ ಪ್ರಾರಂಭವಾದುವು. ಲೇವಾದೇವಿಗಳಿಗೆ ಅನುಕೂಲಿಸುವಂತೆ ಸರ್ಕಾರದ ಬೆಂಬಲದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈಸೂರು ಬ್ಯಾಂಕು ಸ್ಥಾಪನೆಯಾಯಿತು. ಮೈಸೂರಿನಿಂದ ಅರಸೀಕೆರೆಯ ತನಕ ರೈಲುಮಾರ್ಗವನ್ನು ಮಾಡಿಸಿದರು. ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಈ ಮೂರು ನದಿಗಳೂ ತರುವ ನೀರನ್ನು ತಡೆಗಟ್ಟಿ ಕೃಷ್ಣರಾಜ ಸಾಗರವನ್ನಾಗಿ ಮಾಡುವ ಯೋಜನೆಯಂತೂ ಸಂಪೂರ್ಣ ಅವರದೇ. ಇದರಿಂದ ಸಾವಿರಾರು ಎಕರೆ ಜಮೀನು ಸಾಗುವಳಿಯಾಗುತ್ತಿದೆ; ಅಲ್ಲದೆ, ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ಏರ್ಪಡಿಸಿದ್ದ ಶಿವನಸಮುದ್ರದ ವಿದ್ಯುಚ್ಛಕ್ತಿ ಯಂತ್ರಕ್ಕೂ ಸಾಕಷ್ಟು ನೀರೊದಗುತ್ತಿದೆ. ಗ್ರಾಮಾಭಿವೃದ್ಧಿಗಾಗಿಯೂ ಹಿಂದುಳಿದವರ ಮೇಲ್ಮೆಗಾಗಿಯೂ ಮಲೆನಾಡಿನ ಅಭಿವೃದ್ಧಿಗಾಗಿಯೂ ವಿಶ್ವೇಶ್ವರಯ್ಯನವರು ವಿಶೇಷ ಶ್ರಮವಹಿಸಿದರು. ಸರ್ಕಾರಿ ಅಧಿಕಾರಿಗಳಲ್ಲದವರೂ ಕೂಡ ಜನಸೇವೆ ಮಾಡುವಂತ ಅಂತಹವರನ್ನೇ ವಿಶೇಷವಾಗಿ ಸೇರಿಸಿ ಡಿಸ್ಟ್ರಿಕ್ಟ್ ಬೋರ್ಡುಗಳನ್ನೂ ಮುನಿಸಿಪಾಲಿಟಿಗಳನ್ನೂ ರಚಿಸಿದರು.

ತಮ್ಮ ಪ್ರಜೆಗಳೆಲ್ಲರೂ ವಿದ್ಯಾವಂತರಾಗದೆ ಇದ್ದರೆ ಕೈಗಾರಿಕೆಗಳೂ ವ್ಯಾಪಾರವೂ ವ್ಯವಸಾಯವೂ ಮುಂದುವರಿಯುವುದಿಲ್ಲವೆಂದು ತಿಳಿದು ಮಹಾಸ್ವಾಮಿಯವರು ಜನರ ವಿದ್ಯಾಭ್ಯಾಸಕ್ಕೆ ತುಂಬಾ ಅನುಕೂಲ ಮಾಡಿಸಿದರು. ಶಾಲೆಗೆ ಸೇರಿದ ಬಾಲಕರಿಗೂ ಬಾಲಕಿಯರಿಗೂ ಲೋವರ್ ಸೆಕೆಂಡರಿ ತರಗತಿಯವರೆಗೂ ಫೀಜಿಲ್ಲದೆ ಉಚಿತವಾಗಿ ವಿದ್ಯೆ ಕಲಿಸುವ ಉಪಕಾರವನ್ನು ಮಹಾಸ್ವಾಮಿಗಳು ಕರುಣಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದರು. ಬೇರೆ ಯಾವ ಸಂಸ್ಥಾನದಲ್ಲೂ ಇಂತಹ ಉದಾರವಾದ ವಿದ್ಯಾಭ್ಯಾಸ ನಡೆಯುತ್ತಿಲ್ಲ. ವಿದ್ಯಾಭ್ಯಾಸ ಮಾಡಲು ಅನುಕೂಲವಿಲ್ಲದೆ ಹಿಂದೆಬಿದ್ದಿದ್ದ ಕೋಮುಗಳಿಗೆ ಧಾರಾಳವಾಗಿ ಧನಸಹಾಯಮಾಡಿ ಅವರ ಮಕ್ಕಳನ್ನು ಶಾಲೆಗಳಿಗೆ ಸೇರಿಸಲಾಯಿತು. ಆದಿಕರ್ನಾಟಕ ವಿದ್ಯಾರ್ಥಿಗಳಿಗೆ ವಿಶೇಷವಾದ ಅನುಕೂಲಗಳನ್ನು ಕೊಡಲಾಯಿತು. ಹೆಣ್ಣುಮಕ್ಕಳ ಓದಿಗೆ ಸೌಕರ್ಯಗಳನ್ನು ಕಲ್ಪಿಸಲಾಯಿತು. ನೂರಾರು ಹೊಸ ಪಾಠಶಾಲೆಗಳನ್ನು ಸರ್ಕಾರದವರು ಕಲ್ಪಿಸಿದರು. ಇವೆಲ್ಲಕ್ಕೂ ಕಿರೀಟವಾಗಿ ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ಒಂದು ವಿಶ್ವವಿದ್ಯಾನಿಲಯವನ್ನೂ ಸಹ ಸ್ಥಾಪಿಸಿದರು. ಅಲ್ಲಿ ಕನ್ನಡ, ಇಂಗ್ಲೀಷು, ಸಂಸ್ಕೃತ, ಉರ್ದು, ತಮಿಳು, ತೆಲುಗು ಮೊದಲಾದ ಭಾಷೆಗಳನ್ನೂ ಅರ್ಥಶಾಸ್ತ್ರ, ತತ್ವಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ಅನೇಕ ಶಾಸ್ತ್ರಗಳನ್ನೂ ಕಲಿಸುತ್ತಿದ್ದಾರೆ. ಚೆನ್ನಾಗಿ ಕಲಿತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಬಿ.ಎ., ಎಂ.ಎ., ಬಿ.ಇ., ಎಂ.ಬಿ.ಬಿ.ಎಸ್., ಮೊದಲಾದ ಪದವಿಗಳನ್ನು ಕೊಟ್ಟು ಗೌರವಿಸುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ ಮೈಸೂರು ತರುಣರು ಹಿಂದೂಸ್ಥಾನದ ನಾನಾದೇಶಗಳಲ್ಲಿ ಮನ್ನಣೆ ಪಡೆದಿದ್ದಾರೆ; ಮೈಸೂರು ದೇಶದಲ್ಲೂ ಕೂಡ ಅವರಿಂದ ಹೆಚ್ಚು ಜನಸೇವೆಯಾಗುತ್ತಿದೆ.

CC-O. In Public Domain. Digitized by eGangotri

ತಮ್ಮ ಪ್ರಜೆಗಳಿಗೆ ವಿದ್ಯೆಯೂ ಸೇವಾಬುದ್ಧಿಯೂ ದೇಶಭಕ್ತಿಯೂ ಹೆಚ್ಚಿದಹಾಗೆಲ್ಲಾ ಅವರನ್ನು ಸರ್ಕಾರದ ಅಧಿಕಾರಿಗಳೊಂದಿಗೆ ಸೇರಿಸಿಕೊಂಡು ರಾಜ್ಯಭಾರವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕೆಂಬುದೇ ಆಳಿದ ಮಹಾಸ್ವಾಮಿಯವರ ಆಶಯ. ಅದರಂತೆ ಗ್ರಾಮಪಂಚಾಯಿತಿಗಳಿಗೂ, ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ, ಮುನಿಸಿಪಾಲಿಟಿಗಳಿಗೂ ಹೆಚ್ಚು ಹೆಚ್ಚು ಅಧಿಕಾರವನ್ನು ಆಗಾಗ ನೀಡುತ್ತಲೇ ಇದ್ದರು. ನ್ಯಾಯವಿಧಾಯಕ ಸಭೆಗೂ ಪ್ರಜಾಪ್ರತಿನಿಧಿ ಸಭೆಗೂ ೧೯೨೪ ರಲ್ಲಿ ಅವರು ಮತ್ತಷ್ಟು ಸ್ಥಾನಮಾನಗಳನ್ನು ದಯಪಾಲಿಸಿದರು. ಆಗ ಆ ಎರಡು ಸಭೆಗಳನ್ನೂ ಜಗನ್ಮೋಹನ ಬಂಗಲೆಯಲ್ಲಿ ಒಟ್ಟು ಸೇರಿಸಿ ಮಹಾಸ್ವಾಮಿಯವರು, "ನಮ್ಮ ಪ್ರಜೆಗಳು ತಮ್ಮ ಸಮಸ್ತ ಆಡಳಿತವನ್ನೂ ತಾವೇ ನೆರವೇರಿಸಿಕೊಳ್ಳುವುದಕ್ಕೆ ತಕ್ಕ ಶಕ್ತಿಯನ್ನೂ ಬುದ್ಧಿಯನ್ನೂ ಬೆಳಸಲಿ. ದೊಡ್ಡ ದೊಡ್ಡ ಕಾರ್ಯಗಳಿಗೆ ಧೈರ್ಯದಿಂದ ಕೈಹಾಕಲಿ. ಅವುಗಳನ್ನು ಉತ್ಸಾಹದಿಂದ ಆಗಮಾಡಿಸಲಿ. ಹೀಗೆ ಅವರು ದೇಶವನ್ನು ಮುಂದಕ್ಕೆ ತರುವುದನ್ನು ನೋಡಿ ಆನಂದಪಡಬೇಕೆಂಬುದೇ ನಮ್ಮ ಆಸೆ" ಎಂದು ಅಪ್ಪಣೆಕೊಡಿಸಿದರು.

* * *

ಚಿಕ್ಕ ವಯಸ್ಸಿನಲ್ಲಿ ತಮ್ಮೊಂದಿಗೆ ಆಟಪಾಠಗಳನ್ನು ಕಲಿತು ಅನಂತರ ಸರ್ಕಾರದಲ್ಲಿ ಅನೇಕ ಹುದ್ದೆಗಳಲ್ಲಿದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಆಪ್ತ ಕಾರ್ಯದರ್ಶಿಗಳಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರನ್ನು ೧೯೨೬ರಲ್ಲಿ ಮಹಾಸ್ವಾಮಿಯವರು ತಮ್ಮ ದಿವಾನರಾಗಿ ನೇಮಿಸಿದರು. ಇವರು ವಿಶ್ವೇಶ್ವರಯ್ಯನವರ ಯೋಜನೆಯನ್ನೇ ಮುಂದುವರಿಸಿ ಹತ್ತಾರು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ವಿದ್ಯುಚ್ಛಕ್ತಿಯನ್ನು ಸಂಸ್ಥಾನದ ಮೂಲೆ ಮೂಲೆಗೂ ಒಯ್ದು, ಸರ್ಕಾರಕ್ಕೂ ಪ್ರಜೆಗಳಿಗೂ ಬರುತ್ತಿದ್ದ ವರಮಾನವನ್ನು ಹೆಚ್ಚಿಸಿದರು. ಉಕ್ಕು, ಕಾಗದ, ಸಿಮೆಂಟು, ಗಾಜು, ಪಿಂಗಾಣಿ, ಹತ್ತಿ, ರೇಷ್ಮೆ ಬಟ್ಟೆ, ಸೀಮೆ ಗೊಬ್ಬರ ಮೊದಲಾದುವುಗಳನ್ನು ನಮ್ಮ ದೇಶದಲ್ಲೇ ತಯಾರಿಸುವಂತ ದೊಡ್ಡದೊಡ್ಡ ಕಾರ್ಖಾನೆಗಳನ್ನು ಏರ್ಪಾಟು ಮಾಡಿದರು. ಇಂತಹ ಸಂಪದಭಿವೃದ್ಧಿ ಕೆಲಸಗಳನ್ನು ನೋಡಿ ಇತರ ಸಂಸ್ಥಾನದವರೆಲ್ಲರೂ ಮೈಸೂರನ್ನು ತುಂಬಾ ಕೊಂಡಾಡಿದರು. ಗ್ರಾಮಾಭಿವೃದ್ಧಿ ಕಾರ್ಯಗಳಿಗೂ ಮಿರ್ಜಾ ಇಸ್ಮಾಯಿಲ್‌ರವರು ಪ್ರತ್ಯೇಕ ಗಮನ ಕೊಟ್ಟರು. ಪ್ರತಿ ಹಳ್ಳಿಗೂ ಒಂದು ಬಾವಿ, ಒಂದು ಶಾಲೆ, ಒಂದು ಆಸ್ಪತ್ರೆ ಇರಬೇಕಾದದ್ದು ಅಗತ್ಯ ಎಂದು ಅವರು ಹೇಳುತ್ತಿದ್ದರು. ಅದರಂತೆಯೇ ಸಾಧಿಸಲು ತಮ್ಮ ಕೈಲಾದ ಪ್ರಯತ್ನಗಳೆಲ್ಲವನ್ನೂ ಮಾಡಿದರು. ಕೆರೆ ಕಟ್ಟೆ ಕಾಲುವೆಗಳನ್ನೂ ಸೇತುವೆಗಳನ್ನೂ ವಿಶೇಷವಾಗಿ ಕಟ್ಟಿಸಿ ರೈತರಿಗೆ ಸಹಾಯ ಮಾಡಿದರು. ವ್ಯವಸಾಯ ಇಲಾಖೆಯವರೂ ಕೈಗಾರಿಕೆ ಇಲಾಖೆಯವರೂ ಅನೇಕ ಹೊಸ ಪರೀಕ್ಷೆಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆಸಿ ರೈತರಿಗೆ ಲಾಭವುಂಟಾಗುವಂತೆ ಬೀಜ, ಗೊಬ್ಬರ, ನೇಗಿಲು ಮುಂತಾದುವುಗಳನ್ನು ಧಾರಾಳವಾಗಿ ಒದಗಿಸುತ್ತಿರುವರು.

ಹೀಗೆ ಶ್ರೀ ಕೃಷ್ಣರಾಜೇಂದ್ರರ ಆಳ್ವಿಕೆಯಲ್ಲಿ ನಮ್ಮ ಮೈಸೂರು ದೇಶವು 'ಮಾದರಿ ಸಂಸ್ಥಾನ'ವಾಯಿತು. ಮಹಾತ್ಮಾ ಗಾಂಧಿಯವರು ಇಲ್ಲಿಯ ಜನರ ನಡೆನುಡಿಗಳನ್ನೂ, ಅವರ ಸಹೋದರ ಭಾವವನ್ನೂ, ಶಾಂತಿ ಸ್ವಭಾವವನ್ನೂ, ಮಹಾರಾಜರವರ ಪ್ರಜಾಪ್ರೇಮವನ್ನೂ ಕಂಡು ಮೈಸೂರಿಗೆ "ರಾಮರಾಜ್ಯ" ಎಂದು ಹೆಸರಿಟ್ಟರು. 'ನಿಮ್ಮೂರಾವುದು ?' ಎಂದು ಯಾರಾದರೂ ವಿಚಾರಿಸಿದರೆ 'ಮೈಸೂರು' ಎಂದು ಭುಜ ತಟ್ಟಿಕೊಂಡು ಉತ್ತರ ಕೊಡುವ ಭಾಗ್ಯ ನಮಗೆ ದೊರೆಯಿತು.

* * *

೧೯೨೭ನೆ ಇಸವಿಯಲ್ಲಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಪಟ್ಟಾಭಿಷೇಕವಾಗಿ ೨೫ ವರ್ಷಗಳು ತುಂಬಿತು. ಇಂತಹ ಮಂಗಳ ಸಮಾರಂಭವನ್ನು "ರಜತಮಹೋತ್ಸವ" ವೆಂದು ಕೊಂಡಾಡುವುದು ಪದ್ಧತಿ. ಆ ವರ್ಷ ಆಗಸ್ಟ್ ೮ನೆಯ ತಾರೀಖು ಸಂಸ್ಥಾನದಲ್ಲೆಲ್ಲಾ ವೈಭವವೋ ವೈಭವ ! ರಾಜಧಾನಿಯಲ್ಲಿ ನಡೆದ ಒಂದು ವಿಶೇಷ ದರ್ಬಾರಿನಲ್ಲಿ ಪ್ರಜೆಗಳ ಪರವಾಗಿ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು ಮಹಾಸ್ವಾಮಿಯವರಿಗೆ ಸಂಸ್ಥಾನದ ೬೫

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷ ಜನರ ರಾಜಭಕ್ತಿಯನ್ನು ಸಮರ್ಪಿಸಿದರು. ಅದಕ್ಕೆ ಉತ್ತರ ಕೊಡುತ್ತಾ ಮಹಾರಾಜರು, "ಭಗವಂತನು ಮೈಸೂರು ದೇಶಕ್ಕೆ ನಾನಾ ವಿಧವಾದ ಸಂಪತ್ತುಗಳನ್ನು ಅನುಗ್ರಹಿಸಿರುವನು. ಅಲ್ಲದೆ ವಿದ್ಯಾವಿನಯಸಂಪನ್ನರೂ ಉದಾರಿಗಳೂ ಆದ ಪ್ರಜೆಗಳನ್ನೂ ಅನುಗ್ರಹಿಸಿರುವನು. ನಿಮ್ಮೆಲ್ಲರ ಸಹಕಾರದಿಂದಲೇ ನಮ್ಮ ಮೈಸೂರಿಗೆ ಮಾದರಿ ಸಂಸ್ಥಾನವೆಂಬ ಖ್ಯಾತಿ ಬಂದಿರುವುದು. ಇದೇ ರೀತಿಯಾಗಿ ಸಹೋದರರಂತೆ ಕಾರ್ಯನಡೆಸಿ, ಕೃಷಿ, ಕೈಗಾರಿಕೆ, ವ್ಯಾಪಾರ ಇವುಗಳಿಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿ, ಆಗಲೇ ಮುಂದುವರಿದಿರುವ ಇತರ ದೇಶಗಳ ಸಮಕ್ಕೆ ಮೈಸೂರನ್ನು ತರಲು ನಾವೆಲ್ಲರೂ ಪ್ರಯತ್ನಿಸೋಣ. ಎಲ್ಲಾ ಪಂಗಡದವರೂ ಈ ಕಾರ್ಯದಲ್ಲಿ ಒಂದಾಗಬೇಕು" ಎಂದು ಅಪ್ಪಣೆ ಕೊಡಿಸಿದರು. ಈ ಮಾತುಗಳಿಂದ ಶ್ರೀ ಕೃಷ್ಣರಾಜೇಂದ್ರ ಒಡೆಯರಿಗಿದ್ದ ದೇಶಾಭಿಮಾನದ ಆಳವನ್ನು ನಾವು ತಿಳಿದುಕೊಳ್ಳಬಹುದಾಗಿದೆ.

* * *

ಮಹಾಸ್ವಾಮಿಗಳು ಹಿಂದೂಸ್ಥಾನದ ಮಹಾರಾಜರುಗಳಿಗೆಲ್ಲ ಅನೇಕ ವಿಧದಲ್ಲಿ ಆದರ್ಶಪ್ರಾಯರಾಗಿದ್ದರು. ಸಂಗೀತ ಸಾಹಿತ್ಯಗಳಿಗೆ ಅವರು ಕಲ್ಪತರುವಿನಂತಿದ್ದರು. ಎಂತಹ ಉದ್ದಾಮ ವಿದ್ವಾಂಸರೂ ಕೂಡ ಅವರೆದುರು ಹಾಡಿ ಮೆಚ್ಚಿಗೆ ಪಡೆಯುವುದೇ ತಾವು ಕಲಿತದ್ದಕ್ಕೆ ಸಾರ್ಥಕ

CC-O. In Public Domain. Digitized by eGangotri

ಎಂದು ಹೇಳುತ್ತಿದ್ದರು. ಅಲ್ಲದೆ ಅವರು ತಾವೇ ಸ್ವತಃ ಯೂರೋಪಿಯನ್ ಸಂಗೀತವನ್ನೂ ಹಿಂದುಸ್ತಾನಿ ಕರ್ನಾಟಕ ಸಂಗೀತಗಳನ್ನೂ ಅಭ್ಯಾಸ ಮಾಡಿದ್ದರು. ದಕ್ಷಿಣ ದೇಶದ ಮತ್ತು ಉತ್ತರದೇಶದ ಅನೇಕ ಸಂಗೀತಗಾರರನ್ನು ಮೈಸೂರಿನ ಆಸ್ಥಾನವಿದ್ವಾಂಸರಾಗಿ ನಿಯಮಿಸಿದ್ದರು. ಹಾಗೆಯೇ ಕನ್ನಡ, ಸಂಸ್ಕೃತ, ಉರ್ದು, ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ನೂರಾರು ಗ್ರಂಥಗಳನ್ನು ಪಂಡಿತರಿಂದ ಬರೆಯಿಸಿ ಅಚ್ಚು ಹಾಕಿಸಿದರು.

ಶ್ರೀ ಕೃಷ್ಣರಾಜೇಂದ್ರ ಒಡೆಯರವರು ದಯಾಮೂರ್ತಿಗಳಾಗಿದ್ದರು. ತಮ್ಮ ಪರಿಜನರಲ್ಲಿಯೂ ಅವರಿಗೆ ವಿಶೇಷ ಕರುಣೆ ಇತ್ತು. ಅವರೆಲ್ಲರಿಗೂ ಮೃಷ್ಟಾನ್ನವಿಕ್ಕಿಸಿ ಕಡೆಗೆ ತಾವು ಆರೋಗಣೆ ಒಪ್ಪಿಸಿಕೊಳ್ಳುತ್ತಿದ್ದರು. "ಜನಸೇವೆಯೇ ಜನಾರ್ದನ ಸೇವೆ" ಎಂಬುದನ್ನು ಅವರು ಕಾರ್ಯತಃ ಸಾಧಿಸಿದರು. ತಮಗೆ ಸಿಕ್ಕಿದ ರಾಜಪದವಿಯನ್ನು ಜನಸೇವೆಗಾಗಿ ಉಪಯೋಗಿಸಿಕೊಂಡರು. ಅವರ ದೈವಭಕ್ತಿ ಅಪಾರವಾಗಿತ್ತು ; ಅಚಲವಾಗಿತ್ತು. ಮನೆ ದೇವತೆಯಾದ ಶ್ರೀ ಚಾಮುಂಡೇಶ್ವರೀ ದರ್ಶನವನ್ನು ಅವರು ತೆಗೆದುಕೊಳ್ಳುತ್ತಿದ್ದರು. ಭಾರತವರ್ಷದಲ್ಲಿನ ಪುಣ್ಯ ಕ್ಷೇತ್ರಗಳಿಗೆಲ್ಲ ಅವರು ಯಾತ್ರೆ ಹೋಗಿದ್ದರು. ಅಲ್ಲೆಲ್ಲವೂ ಪ್ರಜೆಗಳ ಶ್ರೇಯಸ್ಸಿಗಾಗಿ ಪ್ರತ್ಯೇಕವಾಗಿ ಪೂಜೆಗಳನ್ನೇರ್ಪಡಿಸುತ್ತಿದ್ದರು. "ಪ್ರಜೆಗಳ ಪರವಾದ ಪೂಜೆಯೇ ಮುಖ್ಯ. ಅದೆಷ್ಟು ಚೆನ್ನಾಗಿ ನಡೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದರೂ ಸಾಲದು" ಎಂದು ಅವರು ಆಗಾಗ ಹೇಳುತ್ತಿದ್ದ ರಂತೆ.

ಮಹಾಸ್ವಾಮಿಯವರು ನೆರವೇರಿಸಿದ ಯಾತ್ರೆಗಳ ಲ್ಲೆಲ್ಲ ಕೈಲಾಸ ಶಿಖರ ದರ್ಶನವೇ ಅತ್ಯಂತ ಕಷ್ಟವಾದದ್ದು. ದಾರಿಯುದ್ದಕ್ಕೂ ಎತ್ತರವಾದ ಬೆಟ್ಟದ ಸಾಲುಗಳು, ಹಿಮ ಗಟ್ಟಿದ ಹೊಳೆಗಳು, ಕಡಿದಾದ ಕಣಿವೆಗಳು, ರಭಸದಿಂದ ಧುಮುಕುವ ಜಲಪಾತಗಳು ಇವುಗಳನ್ನು ದಾಟಬೇಕಾ ಯಿತು. ಆ ಪರ್ವತಪ್ರದೇಶದಲ್ಲಿ ಮಹಾಸ್ವಾಮಿಗಳೂ ಪರಿ ವಾರದವರೂ ಬಹುಭಾಗ ಕಾಲು ನಡಿಗೆಯಿಂದಲೇ ಮುಂದು ಮುಂದಕ್ಕೆ ಹೋಗಬೇಕಾಯಿತು. ಹೀಗೆ ಒಂದು ತಿಂಗಳಕಾಲ ಪರ್ವತ ಪ್ರದೇಶದಲ್ಲೇ ಪ್ರಯಾಣಮಾಡಿ, ಕಡೆಗೆ ಮಾನಸ ಸರೋವರ ಎಂಬ ಪುಣ್ಯತಟಾಕದಲ್ಲಿ ಸ್ನಾನಮಾಡಿ ಪ್ರಭು ಗಳು ಕೈಲಾಸ ಶಿಖರದ ಪ್ರದಕ್ಷಿಣೆಯನ್ನೂ ಸಾಂಗವಾಗಿ ನೆರ ವೇರಿಸಿದರು.

ಎಲ್ಲ ಮತಸ್ಥರ ಮೇಲೂ ಮಹಾಸ್ವಾಮಿಯವರಿಗೆ ಪ್ರೀತಿಯೂ ಗೌರವವೂ ಇತ್ತು. "ಯಾರು ಯಾವ ಹೆಸರಿ ನಲ್ಲಿ ಆರಾಧಿಸಿದರೂ, ಯಾವ ರೂಪದಲ್ಲಿ ಭಜಿಸಿದರೂ ಎಲ್ಲರ ಸೇವೆಯನ್ನೂ ಸ್ವೀಕರಿಸುವ ಜಗನ್ನಿಯಾಮಕನಾದ ಸರ್ವೇಶ್ವರ ಒಬ್ಬನೇ" ಎಂದು ಅವರು ಆಗಾಗ ಅಪ್ಪಣೆ ಕೊಡಿಸುತ್ತಿದ್ದರು. ಅವರ ವಿಶಾಲ ಮನಸ್ಸನ್ನೂ ಧರ್ಮ ಜೀವನವನ್ನೂ ಕಂಡು ಎಲ್ಲರೂ ಅವರನ್ನು 'ರಾಜರ್ಷಿ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಆದರಿಸುತ್ತಿದ್ದರು.

೧೯೩೪ರಲ್ಲಿ ಮಹಾಸ್ವಾಮಿಯವರ ಮಾತೃಶ್ರೀಯವರಾದ ಶ್ರೀ ವಾಣೀವಿಲಾಸಸನ್ನಿಧಾನದವರು ಕಾಲವಾದರು. ಮಹಾರಾಜರಿಗೂ ದೇಹಾಲಸ್ಯವುಂಟಾಗಿ ಪ್ರಜೆಗಳಿಗೆ ವಿಪರೀತ ಕಳವಳಕ್ಕೆ ಕಾರಣವಾಯಿತು. ಆಗ ಸಂಪೂರ್ಣ ಆರೋಗ್ಯಪಡೆಯಲು ಹವ ಬದಲಾಯಿಸಿ ಬರುವುದು ಒಳ್ಳೆಯದೆಂದು ವೈದ್ಯರು ಸಲಹೆಕೊಟ್ಟರು. ಅದರಂತೆ ಮಹಾರಾಜರೂ, ತಮ್ಮ ಸಹೋದರರಾದ ಶ್ರೀಮದ್ಯುವರಾಜರೂ, ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರೂ ಹಡಗು ಹತ್ತಿ ಯೂರೋಪ್ ಖಂಡಕ್ಕೆ ಪ್ರವಾಸ ಹೊರಟರು. ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ ಮುಂತಾದ ದೇಶಗಳನ್ನೆಲ್ಲಾ ಸುತ್ತಿ ಬಂದರು. ಯಾವ ದೇಶಕ್ಕೆ ಹೋದರೂ ಅವರು ತಮ್ಮ ಜಪ ತಪ ಉಪವಾಸ ವ್ರತಗಳನ್ನು ಮಾತ್ರ ಕೊಂಚವೂ ಬಿಡಲಿಲ್ಲ. ಲಂಡನ್ ನಗರದಲ್ಲಿದ್ದಾಗ ಥೇಂಸ್ ನದಿಯಲ್ಲೇ ತರ್ಪಣ ಉಪಾಕರ್ಮಗಳನ್ನು ಆಚರಿಸಿದರು. ಹಡಗಿನಲ್ಲೂ ಉಳಿದ ಕಡೆಗಳಲ್ಲೂ ಶ್ರೀ ಚಾಮುಂಡೇಶ್ವರೀ ದೇವಿಯ ವಿಗ್ರಹವನ್ನು ಸಾಂಗವಾಗಿ ದಿನವೂ ಪೂಜಿಸುತ್ತಿದ್ದರು. ಅವರು ಯಾವ ದೇಶಕ್ಕೆ ಹೋದರೂ ಅಲ್ಲಿಯ ವ್ಯವಸಾಯದ ರೀತಿ, ಕೈಗಾರಿಕೆಯ ಕ್ರಮಗಳು, ರೈತರಿಗೆ ಆ ದೇಶದಲ್ಲಿ ಸರ್ಕಾರದವರು ಕೊಟ್ಟಿರುವ ಅನುಕೂಲಗಳು, ಇವೆಲ್ಲವನ್ನೂ ಪರಾಂಬರಿಸುತ್ತಿದ್ದರಂತೆ. "ನಮ್ಮವರ ಕೆಲಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೂರೋಪಿಯನರು ಮಾಡುವ ಕೆಲಸಕ್ಕಿಂತ ಉತ್ತಮವಾಗಿರಬೇಕು" ಎಂದು ಮೈಸೂರಿಗೆ ಬಂದಮೇಲೆ ಅವರು ಅಧಿಕಾರಿಗಳನ್ನು ಎಚ್ಚರಿಸುತ್ತಿದ್ದರಂತೆ.

ಶ್ರೀ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ತಮ್ಮಂದಿರ ಮಕ್ಕಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರನ್ನು ಬಹು ಪ್ರೀತಿಯಿಂದ ಲಾಲಿಸುತ್ತಿದ್ದರು. ಯದುವಂಶಲತೆಯ ಭಾಗ್ಯದ ಕುಡಿಯಂತೆ ಬೆಳೆದು ಯುವ ರಾಜಕುಮಾರರು ವಿದ್ಯೆಯಲ್ಲಿ ಅದ್ಭುತವಾದ ಪ್ರೌಢಿಮೆಯನ್ನು ಸಂಪಾದಿಸಿದರು. ಸಾಮಾನ್ಯ ವಿದ್ಯಾರ್ಥಿಯಂತೆ ಶ್ರೀ ಜಯಚಾಮರಾಜೇಂದ್ರರು ಕಾಲೇಜಿನಲ್ಲಿ ಕಲಿತು ಪರೀಕ್ಷೆಗಳಿಗೆ ಕುಳಿತು ಬಿ. ಎ. ಪದವಿಯನ್ನು ಪಡೆದರು. ಚೆನ್ನಾಗಿ ಓದಿ ವಿಷಯಗಳನ್ನು ಗ್ರಹಿಸಿ ಉತ್ತರ ಬರೆದು ನಂಬರು ತೆಗೆದು ತಮ್ಮ ವಿದ್ವತ್ತಿಗಾಗಿ ಸುವರ್ಣ ಪದಕಗಳನ್ನೂ ಸಹ ಪಟ್ಟಪ್ರದಾನ ಮಹೋತ್ಸವದಲ್ಲಿ ಪಡೆದರು. ೧೯೩೮ರಲ್ಲಿ ಯುವರಾಜಕುಮಾರರಿಗೆ ಚರಖಾರಿ ಸಂಸ್ಥಾನದ ಮಹಾರಾಜಾಧಿರಾಜ ಅರಿಮರ್ದನಸಿಂಗ್‌ರವರ ಸಹೋದರಿಯವರಾದ ಶ್ರೀ ಸತ್ಯಪ್ರೇಮಕುಮಾರಿದೇವಿಯವರನ್ನು ತಂದು ಸಮಸ್ತ ರಾಜವೈಭವದೊಡನೆ ಮೈಸೂರು ಅರಮನೆಯಲ್ಲಿ ವಿವಾಹ ಬೆಳೆಸಲಾಯಿತು. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಜಪಾನ್ ದೇಶಕ್ಕೆ ಪ್ರವಾಸ ಹೋಗಿ ಅಲ್ಲಿಯ ಸ್ಥಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗತಿಗಳನ್ನು ತಿಳಿದು ಬಂದಿದ್ದರು. ೧೯೩೯ನೆ ಇಸವಿಯಲ್ಲಿ ಅವರಿಗೆ ಯೂರೋಪ್ ದೇಶಗಳ ಪರಿಚಯವನ್ನು ಮಾಡಿಸುವ ಸಲುವಾಗಿಯೂ, ತಮ್ಮ ಆರೋಗ್ಯದ ಸಲುವಾಗಿಯೂ, ಅವರ ತಂದೆಯವರಾದ ಶ್ರೀಮದ್ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಅವರ ಕುಟುಂಬ ವರ್ಗದವರೆಲ್ಲರೊಂದಿಗೆ ಹಡಗು ಹತ್ತಿ ಪಾಶ್ಚಾತ್ಯ ದೇಶಗಳಿಗೆ ಪ್ರಯಾಣ ಮಾಡಿದರು. ಮಹಾಯುದ್ಧವು ಹೊಗೆಯಾಡುತ್ತಿದ್ದುದನ್ನು ತಿಳಿದು ಅವರೆಲ್ಲರೂ ಅತಿ ಶೀಘ್ರದಲ್ಲೇ ಹಿಂದಕ್ಕೆ ಬಂದುಬಿಟ್ಟರು. ಜಹಜಿನಿಂದ ಬೊಂಬಾಯಿ ಪಟ್ಟಣದಲ್ಲಿ ಇಳಿದಾಗ ಯುವರಾಜರವರು ಇನ್ನೂ ಅಸ್ವಸ್ಥರಾಗಿಯೇ ಇದ್ದರು. ಅವರ ಆರೋಗ್ಯವು ಕೆಡುತ್ತಾ ಬಂದು ೧೯೪೦ನೆ ಇಸವಿ ಮಾರ್ಚಿ ತಿಂಗಳಲ್ಲಿ ಅವರು ಪರಂಧಾಮವನ್ನೈದಿದರು.

ಶ್ರೀ ಕೃಷ್ಣರಾಜೇಂದ್ರ ಒಡೆಯರವರಿಗೆ ಇದರಿಂದ ತಡೆಯಲಾರದ ದುಃಖ ಸಂಭವಿಸಿತು. ತಮ್ಮ ಸಹೋದರಿಯವರಾದ ಶ್ರೀ ಕೃಷ್ಣಾಜಮ್ಮಣ್ಣಿಯವರು ಕ್ಷಯರೋಗದಿಂದ ಆಗಲೇ ಮೃತಪಟ್ಟಿದ್ದರು. ಜ್ಯೇಷ್ಠ ಸಹೋದರಿಯವರಾದ ಶ್ರೀ ಜಯಲಕ್ಷಮ್ಮಣ್ಣಿಯವರೂ ೧೯೨೪ನೆ ಇಸವಿಯಲ್ಲಿ ದಿವಂಗತರಾದರು. ಮೂರನೆಯ ಸಹೋದರಿಯವರಾದ ಶ್ರೀ ಚಲುವಾಜಮ್ಮಣ್ಣಿಯವರೂ ಸಹ ಕಾಲವಶರಾಗಿದ್ದರು. ಆದ್ದರಿಂದ ಶ್ರೀಮದ್ಯುವರಾಜರ ವಿಯೋಗದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾರಾಜರು ಒಡಹುಟ್ಟಿದವರನ್ನೆಲ್ಲ ಕಳೆದುಕೊಂಡು ಕೇವಲ ಒಂಟಿಯಾದರು. ಚಿಕ್ಕವಯಸ್ಸಿನ ಶ್ರೀ ಜಯಚಾಮ ರಾಜೇಂದ್ರ ಒಡೆಯರವರಿಗೆ ಪಿತೃವಿಯೋಗವಾಯಿತಲ್ಲಾ ಎಂದು ಅವರು ತುಂಬಾ ಮನಮರುಗಿದರು. ಈ ಎಲ್ಲ ಕಾರಣಗಳಿಂದ ಮಹಾಸ್ವಾಮಿಗಳ ಆರೋಗ್ಯವೂ ಕೆಟ್ಟಿತು. ೧೯೪೦ನೆ ಇಸವಿ ಆಗಸ್ಟ್ ೩ನೇ ತಾರೀಖು ರಾತ್ರಿ, ಮೈಸೂರು ಸಂಸ್ಥಾನದ ೬೫ ಲಕ್ಷ ಪ್ರಜೆಗಳನ್ನು ೩೮ ವರ್ಷ ಗಳಿಂದ ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಪರಿಪಾಲಿಸು ತ್ತಿದ್ದ ರಾಜರ್ಷಿಗಳು ಪರಮಾತ್ಮನ ಪಾದಾರವಿಂದವನ್ನು ಸೇರಿದರು.

"ಅಯ್ಯೋ ! ನಾವು ತಬ್ಬಲಿಗಳಾದೆವಲ್ಲಾ !" ಎಂದು ಸಂಸ್ಥಾನದ ಜನರೆಲ್ಲರೂ ಕಣ್ಣೀರಿಟ್ಟರು. ಹಿಂದೂಸ್ಥಾನದ ಲ್ಲೆಲ್ಲಾ ಜನರು ಸಭೆಸೇರಿ ಗತಿಸಿದ ರಾಜರ ಗುಣಗಳನ್ನು ಬಗೆ ಬಗೆಯಾಗಿ ಕೊಂಡಾಡಿ ಅವರ ಆತ್ಮಕ್ಕೆ ಶಾಂತಿಯನ್ನೀಯು ವಂತೆ ಭಗವಂತನಲ್ಲಿ ಪ್ರಾರ್ಥಿಸಿದರು. ಹೊರಗಿನ ದೇಶ ಗಳಲ್ಲೂ ಇಂತಹ ಸಭೆಗಳು ನೂರಾರು ಸೇರಿದುವು. ಮಾದರಿ ಸಂಸ್ಥಾನದ ಮಾದರಿ ಮಹಾರಾಜರು ಎಂದು ಎಲ್ಲರೂ ಮಹಾಪ್ರಭುಗಳ ಗುಣಕಥನ ಮಾಡಿದರು.

ಪ್ರಪಂಚದ ಮಹಾರಾಜರಿಗಿಂತಲೂ ಅವರು ಗುಣ ದಲ್ಲಿ ಹಿರಿಯರಾಗಿದ್ದರು. "ಪ್ರಜಾಸೇವೆಗಾಗಿಯೇ ರಾಜ ಪಟ್ಟ" ಎಂದು ಅವರು ತಿಳಿದಿದ್ದರು. ಸರ್ಕಾರದ ಅಧಿಕಾರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ಹತ್ತಿರ ಮಾತನಾಡುವಾಗ "ನಾವೆಲ್ಲರೂ ಇರುವುದು ಪ್ರಜೆಗಳ ಆರಾಧನೆಗೆತಾನೆ ?" ಎಂದು ಅವರು ಬುದ್ಧಿ ಹೇಳುತ್ತಿದ್ದರಂತೆ. ಸಿರಿಸಂಪತ್ತುಗಳಲ್ಲಿ ಅವರು ಸದಾ ಒಲಾಡಬಹುದಾಗಿತ್ತು. ಆದರೂ ಯೋಗಿಯಂತೆ ತಮ್ಮ ದಿನಚರಿಯನ್ನು ನಡೆಸುತ್ತಿದ್ದರು. ಗುರು ಹಿರಿಯರಲ್ಲಿ ಅವರಿಗೆ ಅಳವಿಲ್ಲದ ಭಕ್ತಿ. ಅವರ ಹೃದಯದಲ್ಲಿ ಪ್ರಾಣಿದಯೆ ತುಂಬಿ ತುಳುಕುತ್ತಿತ್ತು. ರಜತಮಹೋತ್ಸವದ ದಿನ ನಡೆದ ದರ್ಬಾರಿನಲ್ಲಿ ಅವರು ಅಪ್ಪಣೆಕೊಡಿಸಿದ ಭಾಷಣದಲ್ಲಿ ಪ್ರಾಣಿಗಳ ಪರವಾಗಿಯೂ ಎರಡು ಮಾತನ್ನು ಆಡಿ ಜನರಿಗೆ ಬುದ್ಧಿವಾದ ಕೊಟ್ಟರು. "ತಮ್ಮ ಸಂಕಟವನ್ನು ಬಾಯಿಬಿಟ್ಟು ಹೇಳಿಕೊಳ್ಳಲಾರದ ಮೂಕ ಪ್ರಾಣಿಗಳ ವಿಷಯದಲ್ಲಿ ಕನಿಕರ ತೋರಿಸಬೇಕೆಂದು ನಿಮಗೆ ಸೂಚಿಸಲು ಇಚ್ಛಿಸುತ್ತೇನೆ" ಎಂದು ಅವರು ಆ ದಿನ ಅಪ್ಪಣೆ ಕೊಡಿಸಿದರು.

ಈಗ ನಮ್ಮನ್ನಾಳುವ ಶ್ರೀ ಜಯಚಾಮರಾಜೇಂದ್ರ ಒಡೆಯರವರ ತಮ್ಮ ದೊಡ್ಡಪ್ಪಾಜಿಯವರಾದ ಶ್ರೀ ಕೃಷ್ಣ ಪ್ರಭುಗಳಿಂದ ಆಡಳಿತದ ಶಿಕ್ಷಣವನ್ನು ಪಡೆದಿದ್ದಾರೆ. ರಾಜರ್ಷಿಗಳ ದೊಡ್ಡ ದೊಡ್ಡ ಉದ್ದೇಶಗಳನ್ನು ಆಳುವ ಮಹಾಸ್ವಾಮಿಯವರೂ ಕೂಡ ಪರಿಪಾಲಿಸಿಕೊಂಡು ಬರುತ್ತಾರೆ ಎಂಬುದಕ್ಕೆ ಸಂದೇಹವಿಲ್ಲ. ಇದಕ್ಕೆ ಪಟ್ಟಾಭಿಷೇಕ ಮಹೋತ್ಸವದಲ್ಲಿ ಅವರು ಅಪ್ಪಣೆಕೊಡಿಸಿದ ಭಾಷಣವೇ ಸಾಕ್ಷಿ. ಅಂದಿನ ಅವರ ಆ ಭಾಷಣವನ್ನು ಕೇಳಿ ಪ್ರಜೆಗಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಲ್ಲರೂ ಆನಂದಪರವಶರಾದರು. ಅವರ ರಾಜಭಕ್ತಿಯೂ ದೇಶಭಕ್ತಿಯೂ ಇಮ್ಮಡಿಸಿದವು.

"ನಾನು ನನ್ನ ಹಿರಿಯರ ಸಿಂಹಾಸನನ್ನೇರುವ ವ್ರತ ಸಮಾರಂಭವನ್ನು, ನನ್ನನ್ನೂ ನನ್ನ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನರ ಸೇವೆಗಾಗಿ ನಾನು ಸ್ವೀಕರಿಸುವ ಸಮರ್ಪಣದೀಕ್ಷೆ ಎಂಬುದಾಗಿ ಎಣಿಸುತ್ತೇನೆ. ಇದರಲ್ಲಿ ನನ್ನೊಬ್ಬನ ಪ್ರಯತ್ನವೊಂದೇ ಜಯಶಾಲಿಯಾಗಲಾರದೆಂದು ನಾನು ಚೆನ್ನಾಗಿ ಅರಿತಿದ್ದೇನೆ. ನಿಮ್ಮ ನೆರವು, ನಿಮ್ಮ ಸಹಕಾರ, ನಿಮ್ಮ ನಂಬಿಕೆ, ನಿಮ್ಮ ಪ್ರೇಮ—ನನಗೆ ಬೇಕು" ಎಂದು ಅವರು ಪ್ರಜೆಗಳನ್ನು ಕುರಿತು ಆ ದಿನ ಅಪ್ಪಣೆ ಕೊಡಿಸಿದರು.

ನೂರಾರು ವರ್ಷಗಳಿಂದ ನಮ್ಮನ್ನು ಯದುವಂಶದ ಮಹಾಪ್ರಭುಗಳು ಒಂದೇ ಸಮನಾಗಿ ಕಾಪಾಡುತ್ತಾ ಬರುತ್ತಿದ್ದಾರೆ. ಯದುಕುಲತಿಲಕದಂತಿದ್ದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ. ಆಳುವ ಮಹಾಸ್ವಾಮಿಯವರಿಗೂ ರಾಜಕುಟುಂಬದವರಿಗೂ ಭಗವಂತನು ಸರ್ವಮಂಗಳವನ್ನೂ ದಯಪಾಲಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೃಷ್ಣರಾಜೇಂದ್ರ ಒಡೆಯರವರು

ಅಪ್ಪಣೆಕೊಡಿಸಿದ ಕೆಲವು ಉಪದೇಶದ ಮಾತುಗಳು

೧. ನಮ್ಮಿಂದ ಸಾಧ್ಯವಿರುವಮಟ್ಟಿಗೂ ಬೇಗ ಬೇಗ ಒಳ್ಳೆಯದನ್ನು ಮಾಡಿಬಿಡಬೇಕು. ಪ್ರಜೆಗಳಿಗೆ ಆದಷ್ಟು ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಬೇಕು. ಏಕೆಂದರೆ ಜೀವನವು ಕ್ಷಣ ಭಂಗುರವಾದುದು.

೨. ನಮ್ಮಲ್ಲಿ ಅನೇಕರು ಬುದ್ಧಿವಂತರಾಗಿದ್ದರೂ ಕೂಡ ಯೂರೋಪಿಯನರಂತೆ ಶ್ರದ್ಧೆಯಿಂದ ಕೆಲಸಮಾಡುತ್ತಿಲ್ಲ. ಇದು ತಪ್ಪು. ಸರಿಯಾಗಿ ಸಮರ್ಪಕವಾಗಿ ಕೆಲಸ ಮಾಡಿ ನಾವು ಅಭಿವೃದ್ಧಿ ಹೊಂದಬೇಕು. ನಮ್ಮ ದೇಶಕ್ಕೆ ನಾವು ಅನ್ಯಾಯವಾಗಿ ಅಪಖ್ಯಾತಿ ತರಬಾರದು.

೩. ಮನುಷ್ಯರು ತಪ್ಪು ಮಾಡದೆ ಮರಗಳು ತಪ್ಪು ಮಾಡಿಯಾವೆ ! ಆದರೆ ಮಾಡಿದ ತಪ್ಪನ್ನು ಒಪ್ಪಿಕೊಳ್ಳಬೇಕು. ತಿಳಿದ ಕೆಲಸಮಾಡಬೇಕು, ಎಚ್ಚರಿಕೆಯಿಂದಿರಬೇಕು —ಅದು ಮುಖ್ಯ.

೪. ನಮ್ಮ ಸಂಸ್ಥಾನದಲ್ಲಿರುವ ಸಮಸ್ತ ಪಂಗಡಗಳ ಅಭ್ಯುದಯವನ್ನೂ ಸುಖಸಂತೋಷಗಳನ್ನೂ ಸಾಧಿಸುವುದೇ ನಮಗಿರುವ ಏಕಮಾತ್ರ ಧ್ಯೇಯ.

Sri Vidyabharathi Book Centre, Sringeri

CC-O. In Public Domain. Digitized by eGangotri

೫. ನಾವು ಯಾವ ಮತದವರಾದರೂ ಯಾವ ಸಾಧನಾ ಮಾರ್ಗವನ್ನು ಸರಿಯಾಗಿ ಅವಲಂಬಿಸಿದರೂ ಪರಿಣಾಮದಲ್ಲಿ ಒಂದೇ ನಿತ್ಯತತ್ವವನ್ನು ಕಾಣುತ್ತೇವೆ.

೬. ಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ಹೊರಗಿನ ಪ್ರಪಂಚದ ತಿಳಿವಳಿಕೆ ಒಂದೇ ಸಾಲದು ; ಹೊರಗಿನ ಪ್ರಪಂಚದ ವ್ಯಾಪಾರಿಗಳಿಗೆ ಸಾಕ್ಷಿಸ್ವರೂಪನಾಗಿರುವ ಅಂತರಾತ್ಮನ ವಿಷಯವನ್ನೂ ತಿಳಿದುಕೊಳ್ಳುವುದು ಅತ್ಯಾವಶ್ಯಕ.

೭. ದುಃಖಾರ್ತರಾದ ಬಡಪಾಯಿಗಳ ಸ್ಥಿತಿಯಲ್ಲಿ ನಾವೇ ಇದ್ದಂತೆ ಭಾವಿಸಿ ಸಾಧ್ಯವಿರುವಷ್ಟುಮಟ್ಟಿನ ಸಹಾಯವನ್ನು ಅವರಿಗೆ ನೀಡಬೇಕು.

೮. ಭಾರತೀಯರಿಗೆ ಪ್ರಾಣಕ್ಕಿಂತಲೂ ಮಾನವೇ ವಿಶೇಷ ಪ್ರಿಯವಾದ ಧನ. ಇದನ್ನು ನೆನಪಿನಲ್ಲಿಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನರ್ಮುದ್ರಣ ೧೯೮೮ — ೫೦೦೦ ಪ್ರತಿಗಳು

ಬೆಲೆ : ಎರಡು ರೂಪಾಯಿ
Sri Vidyabharathi Book Centre, Sringeri

CC-0. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು

ಜನಪ್ರಿಯ ವಾಲ್ಮೀಕಿ ರಾಮಾಯಣ
ಶರಣ ಚರಿತಾಮೃತ
ವಚನ ಭಾಗವತ
ಶ್ರೀ ಸ್ವಾಮಿ ವಿವೇಕಾನಂದರ
ಸಮಗ್ರ ಕೃತಿಸಾರ ಸಂಗ್ರಹ
ಕನ್ನಡ ಪ್ರತಿಭೆ
ಕನ್ನಡ ಪರಂಪರೆ
ನಳ ಚರಿತ್ರೆ ಸಂಗ್ರಹ
ಕಥಾ ಸಂಕಲನ
ಕರ್ನಾಟಕ ಹವಾ ಸೂಚಿ
ನಕ್ಷತ್ರ ವೀಕ್ಷಣೆ
ನಾಗರಿಕತೆ ಇತಿಹಾಸ
ವಿದ್ಯಾಪೀಠಗಳು

ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳು

ಶ್ರೀ ಕೃಷ್ಣರಾಜೇಂದ್ರ ಒಡೆಯರವರು
ಸಣ್ಣ ಕತೆಗಳು (೧೪೯)
ನವರಾತ್ರಿ—ಕೆಂಪ ಮೈಸೂರಿಗೆ ಹೋದದ್ದು
ಕುಂತೀದೇವಿ
ಅಲ್ಲಮ ಪ್ರಭು
ಧರ್ಮರಾಯನ ಜೂಜು
ಮೂರಿಯ ಕಲ್ಲು
ನಳ ದಮಯಂತಿ
ಕೊಣವೇ ಗೌಡ—ಇತರ ಕಥೆಗಳು
ನಾಡಕತೆಗಳು

ಇನ್ನೂ ಅನೇಕ ಪುಸ್ತಕಗಳನ್ನು ತರಿಸಿ ಓದಿ

Sri Vidyabharathi Book Centre, Sringeri